ವಾರದ ಸಂಚಿಕೆ
Reg No. M 1293
Daily & Weekly
For All Kin ls of
Printing & Binding
The
Satyavadi
Press

SATYAVADI—Oldest Newspaper of Mysore

ಸತ್ಯವಾದಿ

ಸಂಪುಟ 28 ಸಂಚಿಕೆ 316] ಶನಿವಾರ 19—6—1943 [6 ಪೈ

ಪೆಚ್. ಆರ್. ಜಿ. ಸಿ. ಯವರ
ಶ್ರೀ ಪಿಕರ್ಸ್
ತಯಾರಿಕೆ
ವಾಣಿ OR
[Violinist]
ಎಂಬ ಕನ್ನಡ ಸಾಮಾಜಿಕ ಚಿತ್ರ
ನಿಮ್ಮ ಮನರಂಜನೆಗಾಗಿ ಬೇಗನೆ ಬರಲಿದೆ

ಬ್ರಿಟಿಷರು ಸಿಸಲಿ ದ್ವೀಪದಲ್ಲಿ ರಾಜರಾಗಿದ್ದರು

ನೆಪೋಲಿಯನ್ ಯುದ್ಧಕಾಲದಿಂದ ಸಿಸಲಿ ನಿವಾಸಿಗಳು ಬ್ರಿಟಿಷರಲ್ಲಿ ಬಹಳ ಭಕ್ತಿಯುಳ್ಳವರಾಗಿರುತ್ತಾರೆ. ಇಲ್ಲಿಗೆ ಬ್ರಿಟಿಷರು ದಂಡೆತ್ತಿ ಬಂದರೆ ಅವರು ಸ್ವಾಗತ ಮಾಡುವುದರಲ್ಲಿ ಸಂದೇಹವಿಲ್ಲ. ನೆಪೋಲಿಯನ್ ಕಂಡರೆ ಸಿಸಲಿಯವರಿಗೆ ಆಗುತ್ತಿರಲಿಲ್ಲ.

1812 ರಲ್ಲಿ ಸಿಸಲಿಯವರು ಬ್ರಿಟಿಷ್ ಸರ್ಕಾರದವರ ರಾಜನೀತಿಯನ್ನು ಅನುಸರಿಸಿದರು. ಈಗ ಸಿಸಲಿಯವರು ಮುಸಲೋನಿಯ ಫಾಸಿಸ್ಟ್ ಪದ್ಧತಿಯನ್ನು ಅನುಮೋದಿಸುವುದಿಲ್ಲ. ಅಲ್ಲಿರುವ ಗುಪ್ತ ಗುಂಪಿನವರು ಮಾಫಿಯದಲ್ಲಿ ಈಗ ಬಂದು ಸಂಸ್ಥೆಯನ್ನು ಏರ್ಪಡಿಸಿರುವರು. ಬ್ರಿಟೀಷರು ಒರಟಿಕೆಯನ್ನು ಎದರು ನೋಡುತ್ತಿರುವರು. ಕ್ರೀಟ್ ದ್ವೀಪವನ್ನು ಜರ್ಮನಿಯವರು ವಿಮಾನ ಸಹಾಯದಿಂದ ಗೆದ್ದರು. ಈಗ ಮಿತ್ರರು ಸಿಸಲಿಯನ್ನು ಸಮುದ್ರದಿಂದಲೂ, ವಿಮಾನದಿಂದಲೂ ತೆಗೆದುಕೊಳ್ಳುವುದು ಸುಲಭ ಹಿಂದಿನ ಯುದ್ಧವೆಲ್ಲಾ ಇಟಲಿಯಿಂದ ಸಿಸಲಿ, ಸಿಸಲಿಯಿಂದ ಆಫ್ರಿಕಾಕ್ಕೆ ನಡೆಯುತ್ತಿದೆ. ಈಗ ಇದು ಬದಲಾಯಿಸಿ, ಆಫ್ರೀಕಾದಿಂದ ಸಿಸಲಿ, ಸಿಸಲಿಯಿಂದ ಇಟಲಿ, ಇಟಲಿಯಿಂದ ಯೂರೋಪ್ ಹೀಗೆ ನಡೆಯುವುದು.

ಇಟಲಿಯ ಜನಸಂಖ್ಯೆಯಲ್ಲಿ ಹತ್ತರಲ್ಲಿ ಒಂದು ಭಾಗ ಸಿಸಲಿಯಲ್ಲಿರುತ್ತಾರೆ ಇಲ್ಲಿ ಆಲೀವ್ ಎಣ್ಣೆ, ನಿಂಬಿನಾಯಕ, ಹಣ್ಣುಗಳು ಬೆಳೆಯುವ ಸಂಸ್ಥೆಗಳು 4 ಲಕ್ಷಕ್ಕೆ ಮೀರಿವೆ. ಇಲ್ಲಿ ಬೆಳೆದ ಗೋಧಿಯೂ, ಹಣ್ಣು, ಮಾದಿನಾಯಕ ಇವೆಲ್ಲವೂ ಇಟಲಿಗೆ ರಫ್ತಾಗುವುವು. ಮೆಡಿಟರೇನಿಯನ್ ನಿವಾಸಿಗಳಲ್ಲಿ ಸಿಸಲಿಯ ನಿವಾಸಿಗಳು ಬುದ್ಧಿವಂತರು. 3000 ವರ್ಷಗಳಿಂದ ಇದು ಆಫ್ರಿಕಾದಿಂದ ಯೂರೋಪಿಗೆ ಹೋಗುವ ಮಧ್ಯಮಾರ್ಗದಲ್ಲಿದ್ದು ಓಡಾಡಲು ಅನುಕೂಲವಾಗಿದೆ. ಇಲ್ಲಿ ಕ್ರಿ. ಪೂ. 734 ಗ್ರೀಕರು ರಾಜ್ಯ ವಾಳುತ್ತಿದ್ದರು. ಕ್ರಿ. ಪೂ. 241 ಕ್ರಿ ಸ 826 ರೋಮನ್ನರು ಆಳಿದರು. ಜೂಲಿಯನ್ ಸೀಜರ್ ಆದಿಯಾಗಿ ಅನೇಕ ರೋಂ ಅರಸರು ಆಫ್ರಿಕಾ ಮುತ್ತಿಗೆಯಲ್ಲಿ ಸಿಸಲಿಯೇ ಕೇಂದ್ರಸ್ಥಾನಮಾಡಿಕೊಂಡಿದ್ದರು. ರೋಮನರು ಈಜಿಪ್ಟ್ ಗೆಲ್ಲುವುದಕ್ಕೆ ಪೂರ್ವ ಸಿಸಲಿಯು ಇಟಲಿಗೆ ಉಗ್ರಾಣವಾಗಿದ್ದಿತು. ತುರ್ಕಿಯವರು ಆಗ ವಿಶೇಷವಾಗಿ ನೌಕೆಗಳನ್ನು ಇಟ್ಟಿದ್ದರಿಂದ ಅವರೂ ಇಲ್ಲಿ 300 ವರ್ಷಕಾಲ ಅಧಿಕಾರಿಗಳಾಗಿದ್ದರು. ನಂತರ ಸಾರಸೆನರು ಕ್ರಿ ಶ. 826 ಈ ದ್ವೀಪವನ್ನು ಗೆದ್ದರು ಇವರ ಕಾಲದಲ್ಲೇ ಉನ್ನತ ಸ್ಥಿತಿಗೆ ಬಂತು ಕ್ರಿ. ಶ. 950, ಜನಸಂಖ್ಯೆ 30 ಲಕ್ಷ, ಅದರಲ್ಲಿ ಅರ್ಧಭಾಗ ಮುಸಲ್ಮಾನರು. 12 ನೇ ಶತಮಾನದ ಅಂತ್ಯದಲ್ಲಿ ಜರ್ಮನಿಯರು ಈಗಿರುವ ಉನತ್ನ ಸ್ಥಿತಿಗೆ ತಂದರು. ಅಮೇಲೆ ಫ್ರೆಂಚರು ಬಂದರು. ಇವರನ್ನು ಕಂಡರೆ ಸ್ವದೇಶಿಯರಿಗೆ ಆಗುತ್ತಿರಲಿಲ್ಲ. ಮುಂದೆ ಸ್ಪೇನ್ ಜನರೂ, ಬೋರ್ಬನ್‌ರೂ ಒಂದು 1860 ಗ್ಯಾರಿಬಾಲ್ಡಿ ಕೈಗೆ ಬಂದು ಇಟಲಿಯ ಒಂದು ಭಾಗವಾಯಿತು. ಇನ್ನು ಕೆಲವು ದಿವಸಗಳಲ್ಲಿ ಮಿತ್ರರ ಕೈಸೇರುವುದರಲ್ಲಿ ಸಂದೇಹವಿಲ್ಲ.

ನೇಪಾಳದಲ್ಲಿ ಪ್ರತಿ 12 ವರ್ಷಕ್ಕೊಂದಾವೃತ್ತಿ ಮತ್ಸ್ಯೇಂದ್ರ ಜಾತ್ರೆ ನಡೆಯುವುದು. ಇದು ಮಳೆರಾಯನನ್ನು ಪೂಜಿಸುವ ಹಬ್ಬ. ಇದು 2 ತಿಂಗಳಕಾಲ ನಡೆಯುವ ಜಾತ್ರೆ. ಈ ಜಾತ್ರೆಗೆ ನೇಪಾಳ ರಾಜ್ಯದ ಎಲ್ಲಾ ಭಾಗದಿಂದಲೂ ಜನರು ಬಂದು ಸೇರುವರು, ಬ್ರಿಟಿಷ್ ಇಂಡಿಯಾದಿಂದಲೂ ಜನರು ಪರಸೆ ಸೇರುವುದು. ಈ ಜಾತ್ರೆ ಈಗ ಪ್ರಾರಂಭವಾಗುವುದು.

Edited, Printed & published by M. S. Krishna Rao, at the Satyavadi Press. Chamaraja Agrahar, Mysore.

ವಾರ್ತಾತರಂಗ

ಗೊಡಲ್‌ಕ್ಯನಾರ್‌ನಲ್ಲಿ ಏಕಾಶಯದ್ಧ ನಡೆದು ಜಪಾನಿಯರ 17 ವಿಮಾನಗಳು ನಷ್ಟವಾಯಿತು. ಅಮೇರಿಕಾದವರ 6 ವಿಮಾನ ಮಾತ್ರ ನಷ್ಟವಾಯಿತು. ಜಪಾನಿಯರು ಈ ರಣರಂಗದಲ್ಲಿ ಇಷ್ಟು ವಿಮಾನಗಳನ್ನು ಈಗ ಕಳೆದುಕೊಂಡರು, ಅಲ್ಲದೆ ಆಗಾಗ್ಗೆ ಇಲ್ಲಿ ಹೆಚ್ಚು ವಿಮಾನಗಳನ್ನು ಕಳೆದುಕೊಂಡಿರುತ್ತಾರೆ. ಕಾರಣ ಇಷ್ಟೆ? ಇದನ್ನು ತಾವು ಪೆಸಫಿಕ್ ಸಾಗರದ ಕೇಂದ್ರ ಸ್ಥಾನವಾಗಿ ಏರ್ಪಡಿಸಬೇಕೆಂದಿರುವರು.

ಂ ಂ

ಸಿಸಲಿಯಲ್ಲಿರುವ ಸಿವಿಲಿಯನ್ ಜನರು ಜುಲೈ 10 ರ ಒಳಗಾಗಿ ಆ ದ್ವೀಪವನ್ನು ಖಾಲಿಮಾಡಬೇಕೆಂದು ಮುಸಲೋನಿಯ ಆಜ್ಞೆಯಾಗಿದೆ.

ಂ ಂ

ರಾಯಜೂರ್‌ನಲ್ಲಿ ಕ್ಷಾಮವಾದ್ದರಿಂದ ಸೈಜಾಂ ರವರು ಅಲ್ಲಿ 8 ಲಕ್ಷ ರೂಪಾಯಿ ಕಂದಾಯ ಮಾಫಿ ಮಾಡಿರುತ್ತಾರೆ

ಂ ಂ

ಜಪಾನಿಯರ ವಿನಾಶಕಾಲವು ಇನ್ನೇನು ಬಲುಬೇಗನೆ ಆಗುವುದೆಂದು ಡಾ|| ಇವಾನ್ಸ್‌ರವರು ಹೇಳಿದರು

ಂ ಂ

ಡಚ್ಚರ ಈಗ ಜಪಾನಿಯರ ಅಧೀನದಲ್ಲಿರುವ ಸಿಂಗಾರಿಗ್ ಎಣ್ಣೆಕ್ಷೇತ್ರದ ಮೇಲೆ ಅಮೇರಿಕಾ ವಿಮಾನಸ್ಥಾಳಿಯಾಗಿ ತುಂಬಾ ನಷ್ಟವಾಯಿತು.

ಂ ಂ

ಇಂಗ್ಲೆಂಡಿನ ಲೇಬರ್ ಪಾರ್ಟಿಯಲ್ಲಿ ಪೊಲಿಟಿಕಲ್ ಪಾರ್ಟಿಯವರಿಗೂ, ಕೈಗಾರಿಕೆಗಳ ಪಾರ್ಟಿಯವರಿಗೂ ಮನಸ್ತಾಪವಾಗಿದೆ.

ಂ ಂ

ಚಕ್ರವರ್ತಿಗಳು ಉತ್ತರ ಆಫ್ರಿಕಾದಲ್ಲಿ ಸೇನೆಗಳನ್ನು ಪರಾಮರ್ಶಿಸಿದರು. ವೈತ್ತಪತ್ರಿಕೆಗಳ ಪ್ರತಿನಿಧಿಗಳನ್ನು ಭೇಟಿ ಮಾಡಿದರು.

ಹೊಸ ವೈಸರಾಯರು

ಭಾರತ ವೈಸರಾಯ್ ಪದವಿ ಫೀಲ್ಡ್ ಮಾರ್ಷಲ್ ವೇವಲ್‌ರಿಗೆ ಆಗುವುದೆಂದು ಊಹಿಸಲಾಗಿದೆ.

ರಷ್ಯಾ ಜರ್ಮನಿ ರಾಜಿಯೇ

ಸ್ವೀಡಿಷ್ ಪತ್ರಿಕೆಯೊಂದರಲ್ಲಿ ರಷ್ಯ ಜರ್ಮನಿಯು ಸ್ವೀಡಿಷ್ ಒಂದು ಹೋಟಲಿನಲ್ಲಿ ರಾಜೀ ಪ್ರಯತ್ನ ಮಾಡಿದರೆಂದೂ, ಬಾಲ್ಟಿಕ್ ಸಂಸ್ಥಾನಗಳನ್ನು ಜರ್ಮನಿಗೆ ರಷ್ಯಾ ಬಿಟ್ಟುಕೊಡುವುದಾಗಿಯೂ, ಯುಕ್ರೇನ್ ಮಾತ್ರ ಜರ್ಮನಿಗೆ ಬಿಡುವುದಿಲ್ಲವೆಂದೂ, ಹೇಳಿದ್ದರಿಂದ ರಾಜೀ ಪ್ರಯತ್ನ ನಿಂತಿತೆಂದೂ, ಈ ಸುಳ್ಳು ಸುದ್ದಿಯನ್ನು ಜರ್ಮನರೂ ಪ್ರಚಾರ ಮಾಡಿರುವರೆಂದೂ ಹೇಳಲಾಗಿದೆ.

NEXT CHANGE
OPERA
EVENING SHOWS

with
LINDA DARNELL • RITA HAYWORTH
Nazimova • Anthony Quinn • J. Carrol Naish • John Carradine • Lynn Bari • Laird Cregar • Vicente Gomez
Produced by DARRYL F. ZANUCK • Directed by ROUBEN MAMOULIAN
A 20th Century-Fox Picture

ಈವಾರದ ಕಥೆ—

ಸ್ವಯಂಕೃತಾಪರಾಧ

(ಕಳೆದ ವಾರದ ಸಂಚಿಕೆಯಿಂದ ಮುಂದುವರಿದುದು)

ಎಲೆ ಎಮ್ಮೆ! ಇಂದ ನಿನ್ನ ವಿಷಯದಲ್ಲಿ ನನಗೆ ಎಷ್ಟೋ ಸಂತೋಷ. ನಾನೋ ಕಣ್ಣು ಕಾಣದ ಕುರುಡ, ನೀನೋ ನಡೆಯಲಾರದ ಎಮ್ಮೆ; ನಮ್ಮಿಬ್ಬರಿಗೂ ಸರಿಯಾದ ಜೊತೆಯಾಯಿತು. ಈ ಸಮಯದಲ್ಲಿ ಇಷ್ಟು ಸಹಾಯವಿಲ್ಲದಿದ್ದಿದ್ದರೆ ನಾನು ಗುಂಡೀರ ಭಾವದಿಂದ ಮಾವನ ಮನೆಯನ್ನು ಸೇರುವದಕ್ಕೆ ಆಗುತ್ತಿರಲಿಲ್ಲ! ಆದರೆ ಈ ಕುರುಡನು ತಡವರಿಸಿ ನಿನ್ನ ಬಾಲವನ್ನು ಗೊತ್ತುಮಾಡಿಕೊಳ್ಳಬೇಕಾಗಿದೆ. ಆ ಸಂದರ್ಭದಲ್ಲಿ ನಿನ್ನ ವಯಿಖ ಭಾಗದಲ್ಲಿರತಕ್ಕ ಕೊಂಬುಗಳು ಸಿಕ್ಕಿದರೂ ಸಿಕ್ಕಬಹುದು; ಆ ಸಮಯದಲ್ಲಿ ನೀನು ತಿವಿದು ಮೊದಲೆ ಕಣ್ಣುಹಾಳುಮಾಡಿಕೊಂಡು ಬೇಚಾಡುತ್ತಿರುವ ಈ ಕುರುಡನ ಇತರ ಅಂಗಗಳನ್ನು ಘಾಸಿಪಡಿಸಬಹುದು. ಏನಾದರೂ ಕುರುಡನು ಕ್ಷಾಣುವುತೆಯೇ ಇಲ್ಲ. ಕ್ಷವೆಯಲ್ಲಿ ಅಪ್ರತಿಷ್ಠವಾದ ಹೆಸರುವಾಸಿಯನ್ನು ಪಡೆದಿದ್ದೀಯೆ ನೀನು, ಘಾಸಿಪಡಿಸಬೇಡ.

ನೀನು ಪೂರ್ವಾಭಿಮುಖವಾಗಿ ನಡೆಯುತ್ತಿದ್ದಿ ಎಂಬುದು ನಿನ್ನ ಕಾಲಿನ ಶಬ್ದದಿಂದ ಗೊತ್ತಾಗುತ್ತಲಿದೆ. ಹಿಂಭಾಗದಲ್ಲೇ ನೆಪ್ಪಿನ ಮೇಲೆ ನಡೆದು ನಿನ್ನ ಬಾಲವನ್ನು ಪೊರೆಕಿಸಿಕೊಳ್ಳುತ್ತೇನೆ.

ಕೆಲಸಕ್ಕೆ ಬಾರದ ಹರಕು ಚಿಂದಿಗಳನ್ನು ಸೇರಿಸಿ ದಟ್ಟಿ ಹೊಲೆಯುತ್ತಿರುವುದೇ ನಮ್ಮ ತಾಯಿಯವರಿಗೆ ಕೆಲಸ ಇದನ್ನು ನೋಡಿ ಸುಮ್ಮನೆ ಶ್ರಮಪಡುತ್ತಾರಲ್ಲಾ ಎಂದು ಎಷ್ಟೋ ಬೇಜಾರಾಗುತ್ತಿತ್ತು. ಇನ್ನು ಬೇಜಾರಿಲ್ಲ. ಎಷ್ಟು ಹೊಲೆದರೂ ನನಗೆ ಸಂತೋಷವೇ. ಮನೆಯಲ್ಲಿ ಯಾವ ಪದಾರ್ಥವಿದ್ದರೂ ಸಮಯದಲ್ಲಿ ಆದರಿಂದ ಪ್ರಯೋಜನವುಂಟು. ಅವುದನ್ನೂ ಉಪೇಕ್ಷಿಸತಕ್ಕುದಲ್ಲ.

ಕಮಲೆಯು ಮನೆಯಲ್ಲೇ ಸಂಸಾರ ಮಾಡಿಕೊಂಡಿದ್ದ ಪಕ್ಷದಲ್ಲಿ ನನಗೆ ತಾನೇ ಈ ಪೇಚಾಟನೇತಕ್ಕೆ ಉಂಟಾಗುತ್ತಿದ್ದಿತು. ಇನ್ನು ಇದ್ದದ್ದರಲ್ಲಿ ಸುತೋಷಪಟ್ಟುಕೊಂಡು ಇಲ್ಲದ ಹವ್ಯಾಸಗಳನ್ನು ಹತ್ತಿಸಿಕೊಳ್ಳದೆ ನಾಲ್ವರಂತೆ ನಾನೂ ಗಟ್ಟಾಗಿ ಸಂಸಾರ ನೂಡಿಕೊಂಡಿರಬೇಕು. ಇದು ಏನಾಯಿಸಿ ಇನ್ಯಾವ ಗೋಜಿಗೂ ಹೋಗತಕ್ಕದ್ದೇ ಅಲ್ಲ — ಹೀಗೆಂದು ಹೇಳಿಕೊಳ್ಳುತ್ತಾ, ಎಮ್ಮೆಯ ಬಾಲವನ್ನು ತಡವರಿಸಿ ಹಿಡಿದುಕೊಂಡು, ಕುರುಡರಿಗೆ ಹೆಳವರ ಸಹಾಯವೆಂಬುದು ನಿಜವಾದ ಮಾತು. ಎಮ್ಮೆಯು ನೆಲ್ಲಗೆ ನಡೆಯುತ್ತಿರುವ ಹೊತ್ತಿಗೆ ನನ್ನ ಪಯಣವು. ಮೆಲ್ಲಗೆ ನಡೆದು ಮಾವನ ಮನೆಯನ್ನು ಸೇರಿಕೊಳ್ಳುತ್ತೇನೆ ಎಂದು ತೀರ್ಮಾನಿಸಿದನು.

— 3 ನೇ ಅಧ್ಯಾಯ —

ಭೀಮಸಂದ್ರವು ಸಾಮಾನ್ಯ ಹಳ್ಳಿಯಲ್ಲ. ಮೊದಲಿಗೆ ಭೀಮನಾಯಕನೆಂಬ ಪಾಳ್ಯಗಾರನ ಆಸ್ಥಾನ. ಭೀಮಸಂದ್ರಕ್ಕೆ ಕೋಟೆ ಕಂದಕ ಮುಂತಾದ ಸಂಪತ್ತೆಲ್ಲಾ ಉಂಟು.

ಊರಿನ ಮಧ್ಯದಲ್ಲಿ ದೊಡ್ಡ ಹಜಾರ, ಅಥವಾ ಪಂಚಾಯತಿ ಚೌಕ. ದೊಡ್ಡ ಕಲ್ಲು ಕಂಬಗಳಿಂದ ಎತ್ತರವಾಗಿ ಕಟ್ಟಿರತಕ್ಕ ಈ ಹಜಾರವು ಈಗಲೂ ಪಾಠಶಾಲೆಗೂ ಪಂಚಾಯತಿ ಸೇರುವದಕ್ಕೂ ಮುಖ್ಯ ಸ್ಥಳವಾಗಿರುತ್ತದೆ. ಭೀಮನಾಯಕನ ಅರಮನೆ ಇದ್ದ ಸ್ಥಳದಲ್ಲಿ ದೊಡ್ಡ ಮೋಟು ಗೋಡೆಗಳು ಅದ್ಯಾಪಿ ಗತರ್ವಾಗಿ ನಿಂತಿರುತ್ತವೆ.

ಕೋಟೆಯು ಗೋಡೆಗಳಿಂದ ಯಾವ ಪ್ರಯೋಜನವೂ ಕಾಣದೆ ಶಿಥಿಲವಾದ ಕೋಟೆಯಮೇಲೆ ಕಾಡುಗಿಡಗಳು ಹೇರಳವಾಗಿ ಬೆಳೆದು ಗಂಭೀರವಾಗಿ ಕಾಣುತ್ತಿರುವಾಗ್ಯೂ ಹಗಯವರು ಸರಾಗವಾಗಿ ನುಗ್ಗಲವಕಾಶವಿಲ್ಲದ ರೀತಿಯಲ್ಲಿ ಏರ್ಪಟ್ಟಿದ್ದ ಕಂದಕದಿಂದ ಈಗಲೂ ಊರಿನವರಿಗೆ ಪ್ರಯೋಜನವಿಲ್ಲದೆ ಹೋಗಲಿಲ್ಲ. ಮಲವಿಸರ್ಜನೆಗೆ ಬೇರೆ ಸ್ಥಳವೇ ಆವಶ್ಯಕವಿಲ್ಲವೆಂಬ ಭರವಸೆಯನ್ನುಂಟು ಮಾಡತಕ್ಕದ್ದಾಗಿದೆ. ಇದಕ್ಕನುಕೂಲವಾಗಿ ಕುರುಚು ಗಿಡಗಳ ಪೊದರು ಕಂದಕದಲ್ಲಿ ಎಲ್ಲೆಲ್ಲಿಯೂ ಕುಂಬರುತ್ತವೆ.

ಆ ಊರಿನ ದನಕ್ಕೆ ಗುಡಿಸುವವರ ಅವಶ್ಯಕತೆಯೇ ಇಲ್ಲವೆಂಬ ರೀತಿಯಲ್ಲಿ ಪ್ರತಿ ದಿನವೂ ತಂದುಹಾಕಿದ ಹೊಲಸನ್ನು ಹೋಗಲಾಡಿಸುವದು ಮೊದಲನೆಯ ಕೆಲಸ. ಯಾವ ದನ ತಪ್ಪಿಸಿಕೊಂಡರೂ ಕಂದಕದಲ್ಲಿ ಸಿದ್ಧ, ಕಂದಕಕ್ಕಿಳಿಯದುತೆ ದನಗಳನ್ನು ನಿರ್ಬಂಧದಲ್ಲಿಡುವದು ಊರಿನವರಿಗೆ ಸಾಮಾನ್ಯ ಕೆಲಸವಾಗಿರಲಿಲ್ಲ. ಎಷ್ಟು ಕಡೆದರೂ ಆವುದಾದರೊಂದು ಬಗೆಯಲ್ಲಿ ಕಂದಕಕ್ಕೆ ಇಳಿದು ಬೇಳುತ್ತಲೇ ಇರುವನ್ನ.

ಈವತ್ತು ಎಮ್ಮೆಗೆ ಕಾವಲುಗಾರನ ನಿರ್ಬಂಧವೂ ಇಲ್ಲ. ಸ್ವೇಚ್ಛೆಯಾಗಿ ಕಂದಕಕ್ಕಿಳಿದು ತೃಪ್ತಿಪಡಬಹುದು. ಎಮ್ಮೆಯು ಊರಬಾಗಿಲಿನವರಿಗೆ ಮೆಲ್ಲಗೆ ನಡೆಯುತ್ತಿದ್ದ ಕುದುರೆ ಹಾದಿ ಸಿಕ್ಕತ್ತಲೇ ಇಳಿಜಾರಾದ ಆ ನೂರಾರ್ಗದಲ್ಲಿ ಮೆಲ್ಲಗೆ ಇಳಿಯ ತೊಡಗುವುದಾಯಿತು. ಬಾಲವನ್ನು ಹಿಡಿದಿದ್ದ ನಾರಾಯಣ ಮೂರ್ತಿಯು ಘಾಬರಿಗೊಂಡು ಡನಾಗಿ ನಾನು ಅನೇಕವೇಳೆ ಭೀಮಸಂದ್ರಕ್ಕೆ ಬಂದಿರುತ್ತೇನೆ ನೆಪ್ಪಾದ ಈ ದಾರಿಯಲ್ಲಿ ದೊಡ್ಡ ಹಳ್ಳವೆಲ್ಲಿಂದ ಬಂತು ಎಮ್ಮೆಯೇ ನಾದರೂ ಕಂದಕಕ್ಕಿಳಿಯುತ್ತಿದೆಯೋ! ಹೌದು ವಿಶಿಷ್ಟವಾದ ಗಬ್ಬು, ಕಾಲೆಲ್ಲಾ ಹೊಲಸಾಯಿತು ಏನಾದಾಡಲಿ ಎಂದು ಹೇಳಿಕೊಳ್ಳುತ್ತಿರುವಷ್ಟರಲ್ಲಿ ಮಾರ್ಗಕ್ಕ ಡ್ಡಲಾಗಿದ್ದ ತಾರೇನೆಲೆಯನ್ನು ಬಳಸಿ ಇಳಿಯುತ್ತಿತ್ತು. ಇದು ಗೊತ್ತಾಗದೆ ಮೂರ್ತಿಯು ತಾರೇನೆಲೆಯಲ್ಲಿ ಕಾಲಿಟ್ಟು ಸರುಸೇರಾದ. ಈ ಸಂದರ್ಭದಲ್ಲಿ ಮೂರ್ತಿ ಹಿಡಿದಿದ್ದ ಬಾಲವನ್ನು ಬಿಡಿಸಿಕೊಂಡು ಎಮ್ಮೆಯು ಮುಂದಕ್ಕೆ ತೆರಳಿತು.

ಮೂರ್ತಿಯು ಅಲ್ಲಲ್ಲಿ ಹುಡಕಿ ಬಾಲ ದೊರೆಯದೆ ಹೋದ್ದರಿಂದ ಹತಪ್ರಭನಾಗಿ ದೇವರೇ ಈಗತಿಗೆ ತಂದೆಯಾ ಹೊಲಸು ನಾರುತ್ತಿರುವ ಈ ಕಂದಕದಲ್ಲಿ ಬಿದ್ದು ಒದ್ದಾಡಿ ಈ ರಾತ್ರಿಯನ್ನು ಕಳೆಯಬೇಕಾದ ಪ್ರಾಪ್ತವಾಯಿತೇ! ಈ ಕಂದಕವೇ ಇಲ್ಲದ ಕಾಟಕ್ಕೆ ತೀರ್ಮಾನೆಯೆಂದು ಎಲರ್ಟ್ ಆಂಜುತ್ತಿರುವರು, ಇಂಥಾದ್ದರಲ್ಲಿ ಈ ಸ್ಥಳದಲ್ಲಿ ಉಳಿಯುವದುಂಟೆ, ಯಾವ ಬಗೆಯಿಂದಲಾದರೂ ಮೇಲಕ್ಕೆ ಹತ್ತಿ ಪ್ರಾಣಗಳನ್ನು ಉಳಿಸಿಕೊಳ್ಳಬೇಕು ಎಂದು ಕೊಂಡನು.

(ಮುಂದುವರಿಯುವುದು.)

ವಿವಿಧ ವಿಷಯ

ಈಗ ಬೇಸಿಗೆ ರಜ ಬಂದಿರುವುದರಿಂದ ರಷ್ಯನ್ ವಿದ್ಯಾರ್ಥಿಗಳು 16, 17 ವರ್ಷದವರು ಜಮೀನುಗಳಲ್ಲಿ ರೈತಾಪಿ ಕೆಲಸ ಮಾಡಬೇಕಾಗಿರುವುದು.

ಂ ಂ

ಲೆಂಡ್-ಲೀಸ್ ಜಲ್ಲಿನಲ್ಲಿ ಗತ ತಾಲಿನಲ್ಲಿ ಅಮೆರಿಕಾದಿಂದ ತಾವು ಬೆಳೆದ ಆಹಾರ ದಾರ್ಥಗಳಲ್ಲಿ ೀ ಡ 6 ರಂತೆ ಇತರ ೀಶಗಳಿಗೆ ರಫ್ತು ಡಿರುತ್ತಾರೆ. ಈ ವರ್ಷ ಇದನ್ನು 11—12 ರಂತೆ ಹೆಚ್ಚಿಸಬೇಕೆಂದಿರುವರು.

ಂ ಂ

ವ್ಯಾಪಾರ ಅಂಗಡಿಗಳ ಬಾಡಿಗೆ ಮುಂಬಾಯಿಲ್ಲಿ 1-9-1940 ರಲ್ಲಿ ಇದ್ದ ದ್ದಷ್ಟೇ ಇರಬೇಕೆಂದೂ, ಇದಕ್ಕೆ ಮಾರಾಂ ಕೂಡದೆಂದೂ ಸರ್ಕಾರ ಆಜ್ಞೆಯಾಗಿದೆ. 1943 ನೇ ಜೂನ್ 16 ರಂದಿಗೆ ಹೆಚ್ಚಿಗೆ ವಸೂಲಾದ್ದಲ್ಲಿ ಈಗ ಹೆಚ್ಚಿಗೆ ವಜಾ ಮಾಡಕೂಡದೆಂದು, ಇನ್ನಮೇಲೆ ಹಿಂದಿನ ಸಷ್ಟೆ ಬಾಡಿಗೆ ವಸೂಲಾಮಾಡಬೇಕೆಂದು ಸಹಾ ಆಜ್ಞೆಯಲ್ಲಿ ಸೇರಿದೆ.

ಂ ಂ

ಕಳೆದ ತಿಂಗಳು ಅಮೇರಿಕಾದಲ್ಲಿ 7200 ವಿಮಾನಗಳ ತಯಾರಮಾಡಿದರು.

ಬೇಸಿಗೆಯ ಯುದ್ಧವು ರಷ್ಯಾದಲ್ಲಿ ಪ್ರಾರಂಭವಾದಹಾಗೆ ಕಾಣುವುದು. ಈಗ ಓಲಒಳ ಘೀಕರ ಕದನವಾಗುತ್ತಿರುವುದು.

ಂ ಂ

ಕಳೆದ ಬುಧವಾರ ಜಿಬ್ರಾಲ್ಟರಿಗೆ ಬಂದ 30 ವಾ ವಾರದ ಹಡಗುಗಳು ತಕ್ಷಣ ಹೊರಡಬೇಕೆಂದು ಆಜ್ಞೆಯಾದ್ದರಿಂದ ಅವುಗಳೆಲ್ಲವೂ ಅಟ್ಲಾಂಟಿಕ್ ಸಾಗರದ ಕಡೆ ಪ್ರಯಾಣ ಬೆಳೆಸಿದವು. ಈಗ ಜಿಬ್ರಾಲ್ಟರನ್ನ ಹಡಗು 20 ಕ್ಕೆ ಮಿಾರಿಲ್ಲ.

ಂ ಂ

ವಿಮಾನ ಧಾಳಿಯಿಂದ ನೇಪಲ್ಸ್‌ನಲ್ಲಿ ಸತ್ತವರು 2300, ಗಾಯಗೊಂಡವರೂ, ಸತ್ತವರೂ ಸೇರಿ 10 ಸಾವಿರಕ್ಕೆ ಕಮ್ಮಿಯಿಲ್ಲವೆಂದು ಹೇಳಲಾಗಿದೆ.

ಂ ಂ

ಫೆಸಫಿಕ್ ರಣರಂಗದಲ್ಲಿ ಜಪಾನಿಯರ ವಿಮಾನ ನಷ್ಟ 1337, ಕಳೆದ ವರ್ಷ ಜುಲೈನಿಂದ ಎಂದು ಹೇಳಲಾಗಿದೆ, ಅಮೇರಿಕಾದವರ ನಷ್ಟವನ್ನು ಪ್ರಕಟಿಸಿಲ್ಲ.

ಂ ಂ

ಈಗ ಭಾರತೀಯರು ವರ್ಷಕ್ಕೆ ಪ್ರತಿಯೊಬ್ಬರು 17 ಗಜದಂತೆ ಒಟ್ಟಿ ಉಪಯೋಗಿಸುವರೆಂದು ಗೊತ್ತಾಗಿದೆ.

ನಾಣ್ಯಗಳ ಚಲಾವಣೆ

—೦—

ಹಿಂದೆಯೂವ ಯೂವ ದೇಶಗಳಲ್ಲಿ ನಾಣ್ಯಗಳನ್ನು ಯಾವ ರೂಪದಲ್ಲಿ ಊಪ ಯೋಗಿಸುತ್ತಿದ್ದರೆಂಬುದನ್ನು ಇದರಿಂದ ತಿಳಿಯುವುದು ಮೆಕ್ಸಿಕೋವಿನಲ್ಲಿ ಸಾ ಬೂನ್ ಜಲ್ಲೆಯ ಮೇಲೆ ಸರ್ಕಾರ್‌ವು ದ್ರೆ ಬಿದ್ದು ಹೋದು ಆಳಿಸಹೋಗುವವರಿಗೆ ದು ಜಲಾವಣೆಯಲ್ಲಿಕ್ಕು- ಒಂದಾನರ್ತಿ ಒಬ್ಬ ವ್ಯಾಪಾರಿಯು ಒಂದು ಅಮೇರಿಕ ನ್ ಡಾಲರ್ ಮೂಲಕಕೊಟ್ಟು ಪದಾರ್ಥ ಕೊಂಡು, ಬಾಕಿ ಚಿಲ್ಲರೆಗೆ 49 ಸಾಬೂ ನು ಬಿಲ್ಲೆಯನ್ನು ತೆಗೆದುಕೊಂಡನು, ಜೈ ನಾದಲ್ಲಿ ಈಗಲೂ ಟೀಯು ಬಿಲ್ಲೆ ನಾಣ್ಯ ರೂಪದಲ್ಲಿ ಚಲಾವಣೆಯುಲ್ಲಿದೆ. ಇಟಲಿ ಅಬಿಸೀನಿಯ ಯುದ್ಧಮಾಡುವಾಗ ಉಪಿ ನ ಬಿಲ್ಲೆಯು ನಾಣ್ಯವಾಗಿ ಉಪಯೋಗ ಸಲ್ಪಟ್ಟಿತು. ತುರ್ಕಿಯಲ್ಲಿ ಒಂದಾನರ್ತಿ ಗುಂಡಿಗಳನ್ನು ನಾಣ್ಯಕ್ಕೆ ಬದಲಾಗಿ ಉ ಪಯೋಗಿಸುತ್ತಿದ್ದರು. ಸ್ವಲ್ಪ ಕಾಲದ ಹಿಂದೆ ನ್ಯೂ ಫೌಂಡಲೆಂಡಿನಲ್ಲಿ ದೀಪದ ಪಟ್ಟಿಗೆಯನ್ನು ಚಿಲ್ಲರೆ ನಾಣ್ಯಕ್ಕೆ ಬದ ಲಾಗಿ ಉಪಯೋಗಿಸುತ್ತಿದ್ದರು. ಸ್ಪೇನ ಯುದ್ದದಲ್ಲಿ ನಿಕ್ಕಲ್ ನಾಣ್ಯವನ್ನು ಜಲಾ ವಣೆಯಿಂದ ತೆಗೆದು ರಟ್ಟಿನಲ್ಲಿ ನಾಣ್ಯ ಮೂಡಿ ಜಾರಿಗೆತಂದರು. ಆಫಗಾನಿಸ್ತಾನ ದ ಧೊರೆ ಅಮನ್ಯೂಲ ತರುವಾಯ ರಾಜ ನಾದವನು ಲೊಹದನಾಣ್ಯವನ್ನು ಮದ್ದಿ ಗಾಗಿ ಉಪಯೋಗಿಸಲು ಜಕ್ಕ್ಯದ ನಾ ಣ್ಯವನ್ನು ಚಲಾವಣೆಗೆ ತಂದನು. ಕೆಲವು ವರ್ಷಗಳ ಕೆಳಗೆ ಜೈನಾದಲ್ಲಿ ಡಾಲರ ಬೀದಿ ಒಂದು ವಾರದಲ್ಲಿ ಇನ್ನೊಂದು ವಾರವಿರದಿರಲು ಅಂಚೆಚೀಟಿಗಳನ್ನು ಒವ ರು ಉಪಯೋಗಿಸಿದರು ಒಂದು ಕಾಲದ ಲ್ಲಿ ಸೋವಿಯೆಟ್ ಗೀಸರು ಹುಲ್ಲನ್ನೂ, ಪಿಜಿ ದ್ವೀಪದವರು ತಿಮಿಂಗಲದ ಹಲ್ಲನ್ನೂ ವ ರ್ಜೀನಿಯಾದಲ್ಲಿ ತಂಬಾಕನ್ನೂ ಜೈನಾದ ಲ್ಲಿ ಇಲಿಯ ಬಾಲವನ್ನೂ ಕೆನಡಾದಲ್ಲಿ ಇಸ್ಪೀಟನ್ನೂ ಒರ್ಮೂದಲ್ಲಿ ಸೀಸವನ್ನೂ ಬೊನಲ್ಲಿ ದನವನ್ನೂ ರಸ್ಯದಲ್ಲಿ ಪ್ಲಾಟಿ ನಂನನ್ನೂ ನಾಣ್ಯವಾಗಿ ಉಪಯೋಗಿಸು ತ್ತಿದ್ದರು. ಪುರಾತನದಲ್ಲಿ ಬ್ರಿಟೇಪರು ಟಿ ಯನ್ನೂ ಸ್ಕಾಡ್ಲೆಂಡಿನವರು ಉಗರನ್ನೂ ನಾಣ್ಯವಾಗಿ ಉಪಯೋಗಿಸುತ್ತಿದ್ದರು. ಅಫ್ರಿಕಾದ ಕೆಲವರು ತಮ್ಮ ಐಶ್ವರ್ಯವನ್ನು ತಮ್ಮ ಹುಣ್ಣುಗಳು ಕಲೆಗಳು ಇವುಗಳಿಂ ನಿರ್ಧರಿಸುವರು. ಅವರ ಮೈಮೇಲೆ ಎಷ್ಟು ಕಲೆಗಳು ಇದ್ದರೆ ಅಷ್ಟು ಅವರಿಗೆ ಪರ ಲೋಕದಲ್ಲಿ ಆಹಾರ ಸಿಕ್ಕುವುದೆಂದು ತಿಳಿ ದಿರುವರು.

ಮೈಸೂರು ವೈಶ್ಯ ಪತ್ರಿಕೆ

ಉತ್ತಮ ಸಚಿತ್ರ ಕನ್ನಡ ತೆಲಗು

ಮಾಸಪತ್ರಿಕೆಗೆ

ಚಂದಾದಾರರಾಗಿರಿ

ಈಗಿಗ ವಾರ್ಷಿಕ ಚಂದಾ ರೂ. 3-೦-೦

ಬಿಡಿ ಪ್ರತಿ 4 ಆಣೆ.

ಹಿಂದೂ ಬಾಫಮ್ಸ್ ರೈಲ್ವೆ ಬುಕ್‌ಸ್ಟಾಲ್‌ಗಳಲ್ಲಿಯೂ ಪತ್ರಿಕೆಯು ಕೊಂಡಯ್ಯತ್ತಿದೆ.

ಕಾರ್ಯಾಲಯ :

ಶ್ರೀ ವಾಸವಾಂಬ ಭವನ

ಆಶೋಕ ರಸ್ತೆ — ಮೈಸೂರು

For good printing

Saraswati Printing Press

Lansdowne Buildings, Mysore

Lakshminarasimha Press

Srirampet, Mysore

ಅಕ್ಕರ

ಸಾವಾಜಿಕ

ಭಾವಪರಿಪೂರ್ಣವಾದ ಕಥೆ

ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವ ರೆಗೂ ಊಟಕ್ಕೆ ಕೂಡ ಏಳಲು ಮನ ಸ್ಸಾಗುವುದಿಲ್ಲ. ಬೆಲೆ 6 ಆಣೆ. ಪೋಸ್ಟೇ ಜು 1 ಆಣೆ. ಮುಂಗಡ ಕಳುಹಿಸಬೇಕು. ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್, ಮೈಸೂರು

ಈಗ 3 ದಿನಸಗಳಲ್ಲಿ ದಿನಪೊಂವಕ್ಕೆ ಒಂಬೊಂಬು ದ್ವೀಪವು ಮಿತ್ರರ ವಶ ವಾಯಿತಷ್ಟೆ, ಇದರಂತೆ ಪ್ರತಿ ದಿವ ಸವೂ ಒಂದೊಂದು ದ್ವೀಪವು ನಾಜಿಗಳ ಕೈಬಿಟ್ಟರೆ ಹಿಟ್ಲರಿನ ಗತಿ ಏನಾಗುವು ದೆಂದು ಆಫ್ರಿಕಾ ಸೇನೆಯವರು ಕೇಳು ವರು.

ಯೂರೋಪಿನ ಮೇಲೆ ದಂಡಯಾ ತ್ರೆ ಹೊರಡಲು ಮಿತ್ರರು ತುರ್ಕಿಯ ಮುಖಾಂತರ ಗ್ರೀಸ್ ಮೆಸಿಡೋನಿಯ ಗೆಲ್ಲಲು ; ವಿಮಾನ ಸಹಾಯದಿಂದ ಗ್ರೀಸ್ ಮೇಲೆ ; ಸಿರಿಯಾದಿಂದ ಶತ್ರು ಗಳು ಆಕ್ರಮಿಸಿದ ದ್ವೀಪಗಳ ಮೇಲೆ ; ಸಾರ್ಡಿನಿಯಾ ಸಿಸಲಿ ಇಟಲಿ ದಕ್ಷಿ ಣ ಭಾಗ ಇವುಗಳ ಮೇಲೆ — ಹಿಂ ಗೆಂದು ಲಂಡನ್ ಡೇಲಿ ಟೆಲಿಗ್ರಾಫ್ ಪತ್ರಿಕೆ ತಿಳಿಸುತ್ತದೆ.

ಭಾರತೀಯರ ವರ್ತಮಾನ ಯಾತಕ್ಕೆ ಇತರ ದೇಶದವರಿಗಿಂತ ಕಮ್ಮಿ ಎಂದರೆ ಭಾರತೀಯರಿಗೆ ಕೆಲಸ ಸಿಗುವುದಿಲ್ಲ, ಹೆಚ್ಚು ಹೆಚ್ಚಾಗಿ ಕೈಗಾರಿಕೆ ಪದಾರ್ಥ ಗಳನ್ನು ತಯಾರುಮಾಡುವುದಿಲ್ಲ. ಈ ಒಂದು ಉದಾಹರಣೆ ತೆಗೆದುಕೊಳ್ಳಿ. ಭಾರತದಲ್ಲಿ 7 ಲಕ್ಷ ಹಳ್ಳಿಗಳಿವೆ. ಪ್ರತಿ ಯೊಂದು ಹಳ್ಳಿಯವರು ಒಂದೊಂದು ಗಡಿಯಾರ ಕೊಂಡರೆ, ಇದನ್ನು ರಿಪೇರಿ ಮಾಡುವ ಎಷ್ಟು ಕೆಲಸಗಾರರಿಗೆ ಜೀವನ ಸಿಕ್ಕುತ್ತದೆ.

Coming at RANJIT



ಟೀ ಮಹತ್ವ

ಟೀ ಸೇವನೆಯಿಂದ ಒಳ್ಳೆಯದು ಆ ಗುವುದು. ಇದರ ಕೆಟ್ಟಗುಣ ಬಹಳ ಕ ಡಿಮೆ. ದಿನಕ್ಕೆ 10—12 ಆವರ್ತಿ ಕುಡಿದ ರೂ ಬಾಧಕವಿಲ್ಲ, ಮೆದಳುನರ ಈ ವ್ಯಾಧಿಯುಳ್ಳವರಿಗೆ ಒಳ್ಳೆಯದು. ಇದನ್ನು ಚಿಕ್ಕವರು ದೊಡ್ಡವರು ಎಲ್ಲರೂ ಸೇವಿ ಸಬಹುದು ಎಂದು ಪ್ಯಾರಿಸ್ ಡಾಕ್ಟರ್ ಲೂಯಿಲೆವೆರಿಯವರು ಒಂದು ಪುಸ್ತಕದಲ್ಲಿ ಬರೆದಿರುವರು

ಲಂಡನ್ ಪ್ರಖ್ಯಾತವಾದ ಲ್ಯಾಂಕ್ ಸೆಟ್ ಪತ್ರಿಕೆಯು ಸಹಾ ಟೀ ಸೇವನೆ ಯುಮನ್ಸಸನ್ನು ಬದಲಾಯಿಸುತ್ತದೆ ಶಕ್ತಿ ಕೊಡುತ್ತದೆ. ಮುಂದೆ ಕೆಲಸ ನೂಡಲು ಉತ್ತೇಜನ ಕೊಡುವುದೆಂದು ಬರೆದಿದೆ.

ಗೋಧಿಯ ಪ್ರಯೋಜನ.

ಗೋಧಿಯಿಂದ ಊಟಮಾಡಬಹುದು, ಮದ್ದನ್ನು ತಯಾರ್ಮಾಡಬಹುದು, ದ್ರಾವಕಗಳನ್ನು ತಯಾರು ಮಾಡಬಹುದು. ಮೋಡಾರು ಎಣ್ಣೆಯನ್ನು ತಯಾರು ಮಾಡಬಹುದು. ಕೃತಕರಬ್ಬರನ್ನು ತಯಾರು ಮಾಡಬಹುದೆಂದು ಒಬ್ಬ ಕೆನಡಾದ ವ್ಯಾಪಾರಿಯು ಹೇಳಿರುವನು.

ಮುಂದಿನ 3 ತಿಂಗಳಲ್ಲಿ ಸ್ಟ್ಯಾಂಡರ್ಡ್ ಟ್ಟಿಯನ್ನು ತಯಾರು ಮಾಡಲು ಮಿಲ್ಲಿನವರು ಒಪ್ಪಿರುವರು

ಮದರಾಸಿನಲ್ಲಿ ಇನ್ನು ಮುಂದೆ ರೂ 1 ತಿಂಗಳಿಗಿಂತ ಹೆಚ್ಚಾಗಿ ಆಕ್ಷರ ಪದಾರ್ಥಗಳನ್ನು ಶೇಖರಿಸಕೂಡದೆ ಸು ಹುಕುಂ ಹೊರಡಿಸಲಾಗಿರುವುದು,

ವಾರ್ತಾತರಂಗ

ಹೆಂಡ ಕುಡಿಯುವದರಿಂದ ಯಾವ ಒಗೆಯ ಅನರ್ಥಗಳಾಗ ವುವೆಂಬುದನ್ನು ತೋರಿಸಲು ಅಮೆರಿಕಾದಲ್ಲಿ ಒಂದು ಪಾಠಶಾಲೆಯನ್ನು ಏರ್ಪಡಿಸಿರುವರು. ಇಂಥಾ ಪಾಠಶಾಲೆ ಇದುವರೆಗೆ ಪ್ರಪಂಚದಲ್ಲಿ ಎಲ್ಲೂ ಏರ್ಪಾಡಾಗಿರಲಿಲ್ಲ.

ಂ ಂ

ಇದುವರೆಗೆ ಜರ್ಮನಿಯವರು ಅಜಿಂಟೈನಾದಿಂದ ಸಮೂಹಾರವನ್ನು ಗುಪ್ತ ರೀತಿಯಲ್ಲಿ ಕಳುಹಿಸಿ ಅದುಂದ ಅಮೆರಿಕ ನಾವೆಗಳು ಪಯಣಿಗಲು ಅನುಕೂಲವಾಗುತ್ತಿತ್ತು. ಇನ್ನು ಮೇಲೆ ನಾಜಿಗಳು ಕೋಪ ತಂತ್ರಿಯನ್ನು ಕಳಿಸಕೂಡದೆಂದು ಅರ್ಜಂಟೈನಾ ಸರ್ಕಾರದವರು ಆಜ್ಞೆ ಮಾಡಿರುತ್ತಾರೆ.

ಂ ಂ

ಕಾಂಗ್ರೆಸ್ ನಾಯಕರು ಬಂಧನದಲ್ಲಿರುವಾಗ ಅನೇಕ ಕಡೆ ಮಂತ್ರಿಮಂಡಲ ಸ್ಥಾಪಿಸಿ ಮಾಡುವುದು ಸರಿಯಲ್ಲ. ಕಾಂಗ್ರೆಸ್ ನಾಯಕರನ್ನು ಬಿಡಿ, ಎಂದು ಸರ್ವೆಂಟ್ ಆಫ್ ಇಂಡಿಯಾದ ಪಂಡಿತ ಕುಂಸ್ರೂರವರು ಹೇಳುತ್ತಾರೆ.

ಂ ಂ

ಕಲ್ಕತ್ತಾದಲ್ಲಿ ಬಾಡಿಗೆ ಜಾಸ್ತಿ ಮಾಡದ ಹಾಗೆ ಒಂದು ಕಾನೂನು ಇಷ್ಟರಲ್ಲೇ ಜಾರಿಗೆ ಬರುವುದು.

ಂ ಂ

ಉತ್ತರ ಆಫ್ರಿಕಾದಿಂದ ಕೈಸರೆ ಸಿಕ್ಕಿದ ಜರ್ಮನ್ ಸೇನೆಗಳ ಸೈಕಿ ಕೆಲವರಿಂದ ಅಮೇರಿಕಾದಲ್ಲಿ ಡೆನಿವರ್ ಅಣೆಕಟ್ಟನ್ನೂ ಟಿಕ್ಸಾಸಿನಲ್ಲಿ ಒಂದು ಭಾರಿ ಕೆರೆಯನ್ನೂ ಕಟ್ಟಿಸಿದ್ದಾರೆ.

ಂ ಂ

ಮಿತ್ರರಿಗೆ 1943 ರಲ್ಲಿ ಜಯವಾಗುವುದೆಂದು ಓಲ್ಡ್ ಮೂಕ್ ಪಂಚಾಂಗದಲ್ಲಿ ಬರೆದಿದ್ದರು. ಇದನ್ನು ಐರ್ಲೆಂಡಿನಲ್ಲಿ ಏನ್ಯಾರ್ಥವಾಕಿದರು. ಆ ಮಾತುಗಳನ್ನು ತೆಗೆದುಹಾಕಿ ಬೇರೆ ಮುದ್ರಣ ಮಾಡಿ ಅಲ್ಲಿಗೆ ಕಳಿಸಬೇಕಾಯಿತು.

ಂ ಂ

ಜಪಾನಿಗಳು ಚೀನೀಯರ ರಾಜಧಾನಿಯಾದ ಚುಂಕಿಂಗ್ ಮುತ್ತಲು ಹೊರೆಟರು ಚೀನೀಯರು ಅಮೇರಿಕಾದಲ್ಲಿ ತರ್ಪೇತರಾದ ವಿಮಾನಿಕರು ಜಪಾನಿಯರನ್ನು ಹೆಸರು ಹೇಳದಹಾಗೆ ಮಾಡಿಬಿಟ್ಟರು. ಈಗ ಚೀನೀಯರಿಗೆ ಅಮೇರಿಕಾದಿಂದ ವಿಮಾನಗಳು ಬರುತ್ತಿವೆ. ಹಿಂದೆ ಈಗಿನಂತೆ ಸಹಾಯ ಒದಗಿದ್ದರೆ ಅವರು ಇಷ್ಟು ಕಷ್ಟ ಪಡಬೇಗಾಗಿರಲಿಲ್ಲ. ಇನ್ನು ಇವರಿಗೆ ಜಪಾನಿ ಭಯವಿಲ್ಲ :

ಬೆರ್ಲಿನ್‌ನಿನಲ್ಲಿ ಜೀದಿಗಳಲ್ಲಿ ಮಾರಾಮಾರಿಯಾಗಿ ಅನೇಕ ಜರ್ಮನರು ಸತ್ತರು. ಇದಕ್ಕಾಗಿ 800 ಮಂದಿಯನ್ನು ನಾಜಿಗಳು ದಸ್ತಗಿರಿ ಮಾಡಿರುತ್ತಾರೆ.

ಂ ಂ

ಮದರಾಸಿನಲ್ಲಿ ಅಕ್ಕಿಯ ಖರ್ಚು ದಿನಕ್ಕೆ 4725 ಚೀಲಗಳೆಂದು ಸರ್ಕಾರದವರು ಹೇಳುತ್ತಾರೆ.

ಂ ಂ

ನಮಗೆ ಸೂಜಿನೆ ಕೊಡುವುದೇ ತಡ ನಾವು ಗೋರಿಲ್ಲಾ ಯುದ್ಧಕ್ಕೆ ಸಿದ್ಧವಾಗಿರುತ್ತೇವೆ ಎಂದು ಯುಗೋಸ್ಲೊವೇಕಿಯಾದವರು ಹೇಳಿ, ತಾವು 24 ಗಂಟೆಗಳೊಳಗಾಗಿ 25 ಸಾವಿರ ಮಂದಿಯನ್ನು ಸೇರಿಸ ವೆವೆಂದು ಹೇಳಿರುವರು.

ಂ ಂ

ಯುದ್ಧ ಮುಗಿದ ಮೇಲೆ ಪ್ರಪಂಚದವರೆಲ್ಲ ಒಟ್ಟು ಗೂಡಿ ಎಂಪೈರ್ ವಿಮಾನ ಶಾಖೆಯನ್ನು ಏರ್ಪಡಿಸಿರುವರು.

ಂ ಂ

ಅಮೇರಿಕಾ ವಿಮಾನಗಳು ಜಪಾನರ ಕಿಸ್ಕಾ ದ್ವೀಪದ ಮೇಲೆ ಧಾಳಿ ಮಾಡಿರುವವು

ಂ ಂ

ಮಲಬಾರಿನಲ್ಲಿ ಆಹಾರ ಪದಾರ್ಥಗಳು ಸಿಗದೆ ಹೇಳಲಾರದಷ್ಟು ಕಷ್ಟವಾಗಿದೆ. ಎರನಾಡು ತಾಲ್ಲೂಕಿನಲ್ಲಿ ಜನರ ಕಷ್ಟ ಕಣ್ಣಿನಿಂದ ನೋಡಲಾಗುವುದಿಲ್ಲ. ಆ ಜನರು ಎಲೆಗಳನ್ನೂ ಹುಲ್ಲನ್ನೂ ತಿಂದು ಜೀವಿಸುತ್ತಿದ್ದಾರೆ. ಕೊಡಗಿನಿಂದ ಭತ್ತವನ್ನು ಆಲ್ಲಿಗೆ ಕಳಿಸುವ ಏರ್ಪಾಡಾಗಿದೆ.

ಂ ಂ

ಹೈದರಾಬಾದು ಸಂಸ್ಥಾನದಲ್ಲಿ ಹೊಸದಾಗಿ ಯಾವ ಹೊಸ ಕಂಪೆನಿಗಳನ್ನೂ ಸರ್ಕಾರಿ ಅಪ್ಪಣೆಯಿಲ್ಲದೆ ಸ್ಥಾಪಿಸ ಕೂಡದು.

ಂ ಂ

ಪೇಟಲೇರಿಯಾದಲ್ಲಿದ್ದ 6000 ಸಿವಿಲಿಯನ್ನರ ವಿಷಯದಲ್ಲಿ ಮಿತ್ರರು ಅವರಿಗೆ ಬೇಕಾದ ಅನುಕೂಲಗಳನ್ನು ಏರ್ಪಾಡು ಮಾಡಿರುವರು.

ಂ ಂ

ಇಂಗ್ಲೆಂಡಿನಲ್ಲಿರತಕ್ಕ ಎಲ್ಲಾ ಕಲಾನಿಧಿಗಳನ್ನು 300 ಅಡಿ ಹಳ್ಳ ತೆಗೆದು ಭದ್ರ ಸಡಿಸುತ್ತಾರೆ.

ಂ ಂ

ಬೆಂಗಳೂರಿನಲ್ಲಿ ಜೀವನದ ಅಂಕಿ ಅಂಶಗಳು ಏಪ್ರಿಲ್‌ಗಿಂತ 7.2 ಪಾಯಿಂಟ್ ಹೆಚ್ಚಿದೆ, ಅಂದರೆ 181.8 ಪಾಯಿಂಟುಗಳು.

ಸಧ್ಯದಲ್ಲೇ ಫ್ರೆಂಚ್, ಅಮೇರಿಕ, ಬ್ರಿಟಿಷ್ ಸೇನೆಗಳು ಫ್ರಾನ್ಸ್ ದೇಶದಲ್ಲಿ ಎಂದೂ ಕಾಣದ ಮತ್ತು ಕೇಳದಷ್ಟು ಮದ್ದುಗುಂಡುಗಳೊಡನೆ ಒಂದು ಇಳಿಯುವವು. ಏನೂ ಮಾಡಬೇಡಿ, ಸುಮ್ಮನಿರಿ, ತಾಳ್ಮೆ ತೆಗೆದುಕೊಳ್ಳಿ— ಎಂದು ಮೊರಾಕೋದಿಂದ ಅಮೇರಿಕಾದವರು ರೇಡಿಯೋನಲ್ಲಿ ಹೇಳಿದ್ದಾರೆ

ಟುನಿಷಿಯಾ ವಿಜಯದಿಂದ ಇಟಲಿ ನೌಕೆಯವರಿಗೆ ತುಂಬಾ ಆಸಮಾಧಾನವಾಗಿ ತಾವು ನೌಕಾಯಾನ ಸಡೆಸುವುದಿಲ್ಲವೆಂದೂ, ವಿಶ್ರಾರಿಗೆ ಶರಣಾಗತರಾಗುವುದೊಂದೇ ಬಾಕಿಯೆಂದೂ ಗಲಭೆ ಮಾಡಿದರು. ಇದಕ್ಕಾಗಿ ಸರಕಾರದವರು ಈ ನೌಕೆಯವರ ಮೇಲೆ ಗುಂಡುಹಾರಿಸಿ ಸಧ್ಯಕ್ಕೆ ಗಲಭೆ ಕಮ್ಮಿ ಮಾಡಿದರೆಂದು, ಲಂಡನ್ ಪೀಪಲ್ಸ್ ಪತ್ರಿಕೆ ಹೇಳುತ್ತದೆ.

ಜಪಾನೀಯರ ವಂಗೋಲಿಯಾದಿಂದ ಚುಂಕಿಂಗೆ ನುಗ್ಗಬಹುದೆಂದು ಅಮೆರಿಕ ಪತ್ರಿಕೆಗಳು ಹೇಳುವುವು.

ಈಗ 18 ತಿಂಗಳಲ್ಲಿ ಅಮೇರಿಕಾವು 2 ಮಿಲಿಯ ಭೂ ಸೈನ್ಯವನ್ನು ಕಳಿಸಿದೆ, ಈ ಸೈನ್ಯಗಳು ಪ್ರಪಂಚದ ನಾನಾ ಭಾಗದ ರಣರಂಗಗಳಲ್ಲಿರುವವು. ವೈಮಾನಿಕರು 3 ಮಿಲಿಯಕ್ಕೆ ಕಮ್ಮಿಯಿಲ್ಲದೆ ಪ್ರತಿ ದಿನವೂ 90 ಸಾವಿರ ಮೈಲಿ ಆಂತರಿಕ್ಷದಲ್ಲಿ ಪ್ರಯಾಣ ಮಾಡುವರು.

ಮೊನ್ನೆ ಭಾನುವಾರ ಜಪಾನಿನಲ್ಲಿ ಎರಡಾವರ್ತಿ ಭೂಕಂಪವಾಯಿತು, ನಷ್ಟವಿಷ್ಟೆಂದು ಇನ್ನೂ ಪ್ರಕಟವಾಗಿಲ್ಲ.

ಹದ ಕಪ್ಪಿ ಕೆಟ್ಟ ಕಂತಿಗಳನ್ನು ಅಮೇರಿಕ ಕಾರ್ಖಾನೆಯವರು ಸರ್ಕಾರಕ್ಕೆ ಮಾರಿದ್ದರಿಂದ 5 ಕಂಪೆನಿಗಳಿಗೆ 10 ಸಾವಿರ ಡಾಲರ್ ದಂಡ ವಿಧಿಸಿದರು. ಇದರಲ್ಲಿ ಒಬ್ಬ ಭಾಗ ರಷ್ಯಾಕ್ಕೆ ಸೇರಿದೆ.

OPERA

.... Morning Shows —
From 25—6—43



ಯೂರೋಪಿನ ಮೇಲೆ ನುಗ್ಗುವ ವಿಷಯದಲ್ಲಿ ನಾಯಕತ್ವವನ್ನು ಅಮೇರಿಕಾದವರು ತೆಗೆದುಕೊಂಡರೆ ಜನರಲ್ ಮಾರ್ಷಲರಿಗೆ ಪಟ್ಟಾಭಿಷೇಗುವಂತಿದೆ.

ಪೆಸಲಿಯಲ್ಲಿ ಒಂದು ಕೋತಿಯ ಮೃತಪಟ್ಟಿತು. ಇದನ್ನು ದಫನ್ ಮಾಡುವದಕ್ಕೆ ಮುಂಚೆ ಬೀದಿಬೀದಿಗಳಲ್ಲಿ ಮೆರವಣಿಗೆ ಮಾಡಿದರು. ಸಾಮಾನ್ಯರು ಜನರು ಶವದ ಹಿಂದೆ ವ್ಯಸನಾಕ್ರಾಂತರಾಗಿ ಹೋಗಿದ್ದರು. ಎರಡು ಜೊತೆ ಒಲಗದವರು ವಸನಕರವಾದ ರಾಗವನ್ನು ಊದುತ್ತಾ ಹೋದರು.

ಭಾರತದಲ್ಲಿ ಉಪಯೋಗಿಸುವಷ್ಟು ತೆಂಗಿನ ಕಾಯನ್ನು ಪ್ರಪಂಚದಲ್ಲಿ ಮತ್ತೆಲ್ಲಿಯೂ ಉಪಯೋಗಿಸುವುದಿಲ್ಲ. 15 ಲಕ್ಷ ಎಕರೆಗಳಲ್ಲಿ ಈ ದೇಶದಲ್ಲಿ ಬೆಳೆಯುವ ಫಲವನ್ನು ನಮ್ಮವರೇ ಉಪಯೋಗಿಸುವರು.

ಆಫ್ರಿಕಾದ ಡರ್ಬನ್ನಿನಲ್ಲಿ ಒಬ್ಬ ಕಾಮನುಷ್ಯನಿಗೆ 3 ಕಾಲುಗಳಿವೆ. ಹೆಚ್ಚಿನ ಕಾಲು ಸ್ವಲ್ಪ ವೋಕಾಗಿದೆ. ಆದರೂ ಯಾವ ತೊಂದರೆಯೂ ಇಲ್ಲದೆ ನಡೆಯುವನು. ಇವನನ್ನು 100 ಮಂದಿ ವೈದ್ಯರು ಪರೀಕ್ಷಿಸಿದರು.

ಮುಂದೆ ಎತ್ತಕಡೆ

ಹಿಟ್ಲರಿನ ದಂಡೆಯಾತ್ರೆ!

ಹಿಟ್ಲರಿನ ಯೋಚನೆ ಇನ್ನು ಮುಂದೆ ಏನು ಮಾಡಬೇಕೆಂದಿರುವುದು? ಪಿರಿನೀಸ್ ಪರ್ವತದಲ್ಲಿ ಅಂಡೋರಾ ಎಂಬ ಪುಟ್ಟ ಸಂಸ್ಥಾನವಿದೆ. ಇದರ ಜನಸಂಖ್ಯೆ 5500, ಇದು ಸ್ವತಂತ್ರ ರಾಜ್ಯ. ಫ್ರಾನ್ಸು ಮತ್ತು ಸ್ಪೇನು ಗಡಿಯಲ್ಲಿವೆ. ವ್ಯವಸಾಯದಿಂದ ಈ ಜನರು ಜೀವಿಸುವುದು. ರೈ ಬಾರ್ಲಿ ಹೊಗೆಸೊಪ್ಪು ಬೆಳೆಯುವರು. ದ್ರಾಕ್ಷಿಯಿಂದ ಹೆಂಡವನ್ನು ತಯಾರ್ಮಾಡುವರು ಅಲ್ಲದೆ ಬಗೆಬಗೆಯ ಲೋಹದ ಗಣಿಗಳಿರುವುವು. ಜನರಿಗೆ ಕುರಿ ಸಾಕುವದರಲ್ಲಿ ಪ್ರೀತಿ ಹೆಚ್ಚು. ಜನರು ಕಾಟಲನ್ ಭಾಷೆಯನ್ನು ಮಾತನಾಡುವರು. ವಿದ್ಯಾಭ್ಯಾಸ ಒಳಗೆ ಕಮ್ಮಿ, ಫ್ರೆಂಚ್ ಸ್ಪೇನ್ ನಾಣ್ಯಗಳು ಚಲಾವಣೆಯಲ್ಲಿದೆ. ದೇಶವನ್ನು ಫ್ರಾನ್ಸ್ ಮತ್ತು ಉರಗೆಲ್ ಬಿಷಪ್ ನವರು ನೋಡಿಕೊಳ್ಳುವರು ಸರ್ಕಾರವು ಚುನಾಯಿತರಾದ 24 ಸದಸ್ಯರಿಂದ ನಡೆಯುವದು. ಪ್ರತಿ ನಾಲ್ಕು ವರ್ಷಕ್ಕೆ ಒಂದು ಸಲ ಚುನಾವಣೆ ಈ ಪುಟ್ಟ ಸ್ವತಂತ್ರ ರಾಜ್ಯವು ಯಾವುದಕ್ಕೂ ಸೇರದೆ ತಾನೇ ತಾನಾಗಿರುವುದು, ಸಮುದ್ರ ತೀರದ ಹತ್ತಿರವಿದೆ. ಫ್ರಾನ್ಸಿಗಾಗಲೀ ಸ್ಪೇನಿಗಾಗಲೀ ಸಂತಾಗವಾಗಿ ಒಡಾಡಲು ರಸ್ತೆಗಳಿಲ್ಲ. ಈ ರಾಜ್ಯದಿಂದ ನಾಜಿಗಳಿಗೆ ನಿವ್ರೆಯಿಲ್ಲ. ಫ್ರಾನ್ಸಿನಿಂದ ಅನೇಕರು ಇಲ್ಲಿಗೆ ತಪ್ಪಿಸಿಕೊಂಡು ಹೋಗುತ್ತಿರುವುದು ಈಗ ನಾಜಿಗಳಿಗೆ ತಿಳಿಯಿತು. ಇವರು ಯುದ್ಧದಲ್ಲಿ ಯಾರ ಸಂಗಡವೂ ಸೇರಿಲ್ಲ. ಅಲ್ಲದೆ ಸ್ವತಂತ್ರ ರಾಜ್ಯ. ಹಿಟ್ಲರಿನ ಬೇಳೆ ಇಲ್ಲಿ ಬೆಯ್ಯುವುದಿಲ್ಲ. ಜರ್ಮನಿಯಲ್ಲಿದ್ದ 300 ಮಂದಿ ಕೋಟ್ಯಾಧೀಶ್ವರರು ಇಲ್ಲಿಗೆ ಒಂದು ಸೇರಿರುವರು ಇವರಲ್ಲಿ ಬ್ರಿಟಿಷರೂ ಅಮೇರಿಕಾದವರೂ ಇರುತ್ತಾರೆ. ಜನರು ಒಡವರಾದರೂ ಧೈರ್ಯವಂತರು. ವ್ಯಾಪಾರ ಮಾಡುವುದು, ಕುರಿ ಸಾಕುವುದು ಇಷ್ಟಾದರೂ ಇವರ ಹೊಟ್ಟೆ ತುಂಬುವುದಿಲ್ಲ. ಹಿಂದೆ ಇವರು ಹೊಗೇ ಸೊಪ್ಪು ಒಡಜೆ ಇವೆಲ್ಲಾ ಪಾರಾಸಿಕೊಂಡು ಬರುತ್ತಿದ್ದರು. ಈಗ ಹಿಟ್ಲರಿನ ಶತ್ರುಗಳಾದ ಫ್ರಾನ್ಸಿನ ಹೆಂಗಸರು ಗಂಡಸರುಗಳಿಗೆ ಆಶ್ರಯ ಕೊಡುತ್ತಿದ್ದಾರೆ. ಹೀಗೆ ಮಾಡುವುದರಿಂದ ಇವರಿಗೆ ಈಗ ಜೀವನವು ಸುಲಭವಾಗಿ ಜರುಗುತ್ತಿದೆ. ಇದನ್ನು ನೋಡಿ ಹಿಟ್ಲರು ಕೈ ಹಿಸುಗಿಕೊಳ್ಳುತ್ತಿರುವಂತೆ ಮಾಡಿದೆ. ಇವರನ್ನು ಹಿಡಿಯಲು ಹಿಟ್ಲರಿಗೆ ಸಾಧ್ಯವೇ? ಈ ಪಿರಿನೀಸ್ ಬೆಟ್ಟದಲ್ಲಿ ಇವರನ್ನು ಹಿಡಿಯುವ ಕೆಲಸ ಯಾರಿಂದಲೂ ಆಗುವುದಿಲ್ಲ. ಈ ಅಂಡೋರ ಜನರಿಗೆ ಆ ದೇಶದ ದಾರಿ ಗೊತ್ತು. ಅವರೇ ಆಶ್ರಿತರನ್ನು ಸಮುದ್ರದ ಕಡೆ ಕರೆದುಕೊಂಡು ಹೋಗಬೇಕು. ಅಲ್ಲಿಂದ ಅವರು ಹಡಗಿನಲ್ಲಿ ಪಾರಾಗುವರು. ಇದನ್ನು ನೋಡಿ ಈ ರಾಜ್ಯವನ್ನು ಮುತ್ತುವ ಯೋಚನೆ ಹಿಟ್ಲರ್ ವೈದಳಿನಲ್ಲಿ ಸೇರಿದೆ. ಮುಂದೆ ನೋಡಬೇಕು!

ಅಮೇರಿಕಾದ ಹುಚ್ಚು

ಅಮೇರಿಕವು ವಿಚಿತ್ರ ದೇಶ. ಫ್ಯಾಷನ್ನಿನ ಹುಚ್ಚು ವ್ಯಾಪಿಸ್ಸಿನ ನಂತರ ಅಮೇರಿಕಾದಲ್ಲಿ ವಿಶೇಷವೆನ್ನಿಸಿದ್ದು. ಸಿನಿಮಾ ನಟಿಯರ ಫ್ಯಾಷನ್ನನ್ನು ಅನುಸರಿಸುವುದರಲ್ಲಿ ಬಹುಶಃ ಅಮೇರಿಕಾಕ್ಕೇ ಪ್ರಥಮ ಸ್ಥಾನ. ಓರ್ವ ಸಿನಿಮಾ ನಟಿಯು ಕೂದಲಿನ ಫ್ಯಾಷನ್ನಿಂದ ಅಮೇರಿಕಾದ ಯುದ್ಧ ಕೈಗಾರಿಕೆಗೇ ಹೇಗೆ ನೇರವಾಗಿ ತಡೆಯಾಯಿತು ಎಂಬ ವಿನೋದಕರ (ವಿಷಾದಕರವೂ ಆಹುದು) ಸುದ್ದಿಯೊಂದು ಬಂದಿದೆ. ವೆರೊನಿಕಾ ಲೇಕ್ ಎಂಬ ಸಿನಿಮಾ ನಟಿಯು ಉದ್ದ ಕೂದಲನ್ನು ಬೆಳೆಸಿದ್ದಾಳೆ. ಇದನ್ನು ನೋಡಿ ಅಮೇರಿಕಾದ ಹುಡುಗಿಯರು 'ಬೊಬ್ ಕಟ್' ಪದ್ಧತಿ ಬಿಟ್ಟು, ಉದ್ದ ಕೂದಲಿಗೆ ತೊಡಗಿದರು. ಯುದ್ಧ ಕೈಗಾರಿಕೆಗಳಲ್ಲಿ ಸಾವಿರಾರು ಹುಡುಗಿಯರು ನೇಮಕ ಹೊಂದಿದವರುಂಟು. ಇವರೂ ಉದ್ದ ಕೂದಲನ್ನು ಬೆಳೆಸಿದರು. ಕೆಲಸದಲ್ಲಿ ತೊಡದಿದ್ದಾಗ ಅನೇಕರ ಕೂದಲು ಗಾಳಿಗೆ ಹಾರಿ ಯಂತ್ರದಲ್ಲಿ ಸಿಲುಕಿ, ತಲೆಯ ತೊಗಟೆಯೇ ಹಾರಿ ಹೋಯಿತು ಪ್ರಾಣಕ್ಕೂ ಅಪಾಯ. ಇಂತಹ ಅವಘಡಗಳಾದರೆ ಕಾರ್ಖಾನೆಯಲ್ಲಿಯೂ ಗೊಂದಲ. ಯುದ್ಧ ಕೈಗಾರಿಕೆಗೆ ಇದು ದೊಡ್ಡ ಆತಂಕವಾಯಿತು ವಿಚಾರ ಮಾಡಿ ನೋಡಿದಾಗ ವೆರೋನಿಕಾ ಲೇಕ್ ಮಾರಾಣಿಯ ವರದಾನವೆಂದು ಗೊತ್ತಾಯಿತು. ವೆರೊನಿಕಾ ಉದ್ದ ಕೂದಲಿಟ್ಟುಕೊಳ್ಳುವವರೆಗೆ ಇತರ ಹುಡುಗಿಯರು ತಮ್ಮ ಕೂದಲನ್ನು ತೆಗೆಯುವದಿಲ್ಲ ಸರಕಾರವು ವೆರೊನಿಕಾ ಲೇಕಳನ್ನು ವಿನಂತಿಸಿಕೊಳ್ಳಬೇಕಾಯಿತು. 'ದೇಶದ ಹಿತದಲ್ಲಿ' ವೆರೋನಿಕಾ ಕೂದಲು ಕತ್ತರಿಸಿದಳು. ಕೂಡಲೇ ಇತರ ಹುಡಗಿಯರೂ ಕೂದಲಿಗೆ ಕತ್ತರಿಯಿಟ್ಟರು. ಸುಧಾತ ದೇಶಗಳಲ್ಲಿನ ಕುರಿನುಂದಿಗಳಿಂದ ಕೂ)

ಜರ್ಮನರ ದಿಗಿಲು

ಮಿತ್ರರ ವಿಜಯದಿಂದ ಜರ್ಮನರು ತಾವು ಆಕ್ರಮಿಸಿರುವ ರಾಜ್ಯಗಳಲ್ಲಿನ ಜನರು ದಂಗೆ ಎದ್ದಾರೆಂದು ದಿಗಿಲು ಬಿದ್ದಿರುವರು.

ಜರ್ಮನರು ನಾರ್ವೆ ಸ್ವೀಡನ್ ಗಡಿ ಭದ್ರವಾಗಿ ಕಾಯುತ್ತಿರುವರು,

ಂ ಂ

ಬಾಂಧವ್ಯಕ್ಕೆ ಧಕ್ಕೆ

ನಾಜಿಗಳ ಬೇಡಿಕೆಗೆ ಮತ್ತೆ ಫಿನಿಷ್ ಸರಕಾರವು ಮನ್ನಣೆ ಕೊಡುತ್ತಿರುವುದರಿಂದ ಅಮೇರಿಕಾ ಫಿನ್‌ಲೆಂಡಿನ ಬಾಂಧವ್ಯವು ಚೆನ್ನಾಗಿಲ್ಲವೆಂದು ತೋರುವುದು.

ಂ ಂ

ಇಂಡೂರು ಮಹಾರಾಜರು

ಇಂಡೂರು ಮಹಾರಾಜರು ತಮ್ಮ ಅಮೇರಿಕ ಹೆಂಡತಿಯ ಹೊಟ್ಟೆಯಲ್ಲಿ ಹುಟ್ಟಿದ ಮತ್ತು 9 ವರ್ಷ ವಯಸ್ಸಾಗಿರುವ ಹೆಣ್ಣು ಮಗಳನ್ನು ಆದರ ತಾಯಿಯ ಬಳಿ ಬಿಡುವುದಾಗಿಯೂ, ರಾಣಿಯು ಸ್ವಲ್ಪ ಐಶ್ವರ್ಯದಿಂದ ತೃಪ್ತಳಾಗುವಳೆಂದೂ, ರಾಜರೂ ವಿವಾಹವಿಚ್ಛೇದನ ಮಾಡುವುದಿಲ್ಲವೆಂದೂ ಹೇಳಲಾಗಿದೆ.

ಂ ಂ

ಸ್ಟಾಂಪು ಕಳ್ಳರು

ಕರಾಚಿಯಲ್ಲಿ ಪೋಲೀಸಿನವರು ಕೆಲವು ಅಂಚೆ ಜವಾನರನ್ನೂ ಒಬ್ಬ ಬ್ಯಾಂಕು ಗುಮಾಸ್ತೆಯನ್ನೂ ಇತರರು ಕೆಲವರನ್ನೂ ದಸ್ತಗಿ ಮಾಡಿದರು. ಇವರುಗಳು ಏರ್‌ಮೇಲ್, ವಿದೇಶೀ ಟಪಾಲುಗಳಲ್ಲಿ ಮುದ್ರೆ ಒತ್ತದ ಸ್ಟಾಂಪುಗಳನ್ನು ಸೇರಿಸುತ್ತಲೂ ಮಾರುತ್ತಲೂ ಇದ್ದರಂತೆ. ಇವರು ಮನೆಗಳನ್ನು ಶೋಧಿಸಿನೋಡಲು ನೂರಾರು ರೂಪಾಯಿಗಳ ಮುದ್ರೆ ಒತ್ತದ ಸ್ಟಾಂಪುಗಳು ಸಿಕ್ಕಿರುತ್ತವಂತೆ.

ವಿವಿಧ ವಿಷಯ

ಪಂಜಾಬು ವಿಶ್ವವಿದ್ಯಾನಿಲಯದವರು ಒಬ್ಬ ಮಂದಕಿಗೆ ಎಂ. ಓ ಎಲ್. ಡಿಗ್ರಿಯನ್ನು ಕೊಟ್ಟಿರುವರು. ಇದಕ್ಕಾಗಿಯೇ ಒಂದು ಕಾರ್ಯೋಕೇಷನ್ ನಿರ್ಮಿಸಿದ್ದರು. ಇಷ್ಟೇಕೆ? ನಮ್ಮ ರಾಜಧಾನಿಯಲ್ಲಿ ಒಬ್ಬ ಮಹಿಳೆಯು ರಿಟೈರಾದ ವೇಲೆ ಬಿ. ಎ. ಡಿಗ್ರಿ ತೆಗೆದುಕೊಳ್ಳಲಿಲ್ಲವೇ?

ಂ ಂ

ಈಗ ಅಮೇರಿಕಾದವರೂ ಒಂದು ಬಗೆ ಕನ್ನಡಕವನ್ನು ತಯಾರ್ಮಾಡಿರುವರು' ಇದನ್ನು ಹಾಕಿಕೊಂಡರೆ ಸೂರ್ಯರಶ್ಮಿ ಬಾಧಿಸುವುದಿಲ್ಲವಂತೆ. ಸೈನಿಕರು ಇದನ್ನು ಧರಿಸಿಕೊಂಡು ಅಂತರಿಕ್ಷದಲ್ಲಿ ಶತ್ರುಗಳ ವಿಮಾನವನ್ನು ನೋಡಬಹುದು.

ಂ ಂ

ಲಂಡನ್ನಿನಲ್ಲಿ ವಿಮಾನಧಾಳಿ ಅಭ್ಯಾಸದಲ್ಲಿ ಒಬ್ಬ ಹುಡುಗಿಯ ಆಯಾಸಗೊಂಡಳು. ಆಗ ಅಲ್ಲಿದ್ದವರು ಅವಳಿಗೆ ಒಂದು ಕಪ್ಪು ಟೀಯನ್ನು ಕೊಟ್ಟರು. ಅವಳು ಟೀಯನ್ನು ಕುಡಿದು ನೆಗೆಯುತ್ತಾ, 'ನಾನು ಇನ್ನೊಂದು ಸಲ ಮೂರ್ಛೆಗೊಳ್ಳಲೇ, ನನಗೆ ಮತ್ತೊಂದು ಸಲ ಟೀ ಸಿಗುವುದು, ನನಗೆ ಮನೆಯಲ್ಲಿ ನಮ್ಮ ತಾಯಿಯು ಟೀಯನ್ನು ಕೊಡುವುದಿಲ್ಲ' ಎಂದಳು!

ಂ ಂ

ಒಂದು ಛತ್ರಿಯನ್ನು 1772 ರಲ್ಲಿ ಭಾರತದಿಂದ ಅಮೇರಿಕಾಕ್ಕೆ ತರಿಸಿಕೊಂಡು, ನಂತರ ಅಲ್ಲಿ ತಯಾರುಮಾಡುವುದನ್ನು ಕಲಿತುಕೊಂಡರು.

ಂ ಂ

ನ್ಯೂಯಾರ್ಕಿನಲ್ಲಿ ಶ್ರೀಪಂತರು ನಾಯಿಯ ಸತ್ತನೇಲೆ ಹೂಳಿ ಗೋರಿ ಕಟ್ಟಿಸುವರು, ಈ ಗೋರಿ ಉಸ್ತುವಾರಿಗೆ ವರ್ಷಕ್ಕೆ 6000 ರೂಪಾಯಿ ಕೊಡುವರು.

ಂ ಂ

ಭೂಮಿಯೊಳಗೆ 4 ಮೈಲಿ ಸುರಂಗ ಕೊರೆದು ಮತ್ತೊಂದು ಹೊಸ ದಾರಿಯನ್ನು ರಷ್ಯನರು ತಯಾರ್ಮಾಡುತ್ತಿರುವರು. ಇದು ಮಾಸ್ಕೋದಿಂದ ಕಾರ್ಖಾನೆಗಳಿರುವ ಸ್ಥಳಕ್ಕೂ ಸ್ಟಾಲಿನ್ ಮೋಟಾರು ಕಾರ್ಖಾನೆಗೂ ಹೋಗಬಹುದಾಗಿದೆ. ಇದು ಈಜಿಪ್ತಿಗೆ ಕೂಲಿಗಾರರು ಓಡಾಡಲು ಬಿಟ್ಟಾಗ ತಿಳಿಯಿತು. ಇದನ್ನು ತಯಾರು ಮಾಡುವಾಗ ಯಾರಿಗೂ ತಿಳಿಯದಹಾಗೆ ಬಹಳ ರಹಸ್ಯವಾಗಿಟ್ಟಿದ್ದರು. ಮಾಸ್ಕೋದಿಂದ ಈ ನಗರಕ್ಕೆ ಇದು ಮೂರನೇ ರಸ್ತೆಯಾಗಿದೆ.

ದೇಶಾಭಿಮಾನ ಸ್ವಾಭಿಮಾನ

ಇವುಗಳೆರಡರ ದೃಷ್ಟಿಯಿಂದಲೂ ಮೈಸೂರಿನವರಿಗೆ ಜೀವವಿಮೆ ಮಾಡಲು

ಮೈಸೂರು ಸರ್ಕಾರದ ಜೀವವಿಮೆ ಇಲಾಖೆಯು!

ಪ್ರಜೆಗಳ ಶಾಖೆಯೇ ಅತ್ಯುತ್ತಮ ಸಂಸ್ಥೆ!

ವಿಮೆಯ ಮೊಬಲಗಿಗೆ ಸರ್ಕಾರದ ಹುಟ್ಟುವಳಿಯೇ ಆಧಾರ

ವಿಮೆಯಹಣವನ್ನು ಸ್ವಲ್ಪವೂ ಸಾವಕಾಶವಿಲ್ಲದೆ ಪಾವತಿಮಾಡಲಾಗುವದು

ವಿಮೆದಾರರಿಗೆ ಆಡಳಿತ ಸಮಯದಲ್ಲಿ ಪ್ರಾತಿನಿಧ್ಯವುಂಟು

ಸಾವಿರಕ್ಕೆ ಸಾಲಿಯಾನಾ ಇಪ್ಪತ್ತು ರೂ. ಗಳಂತೆ ಬೋನಸ್ ಹಂಚಿಕೆ

ಹೆಚ್ಚು ವಿವರಗಳಿಗೆ ದಯವಿಟ್ಟು ಬರೆಯಿರಿ—

ಸೆಕ್ರೆಟರಿ,
ಮೈಸೂರು ಸರ್ಕಾರದ ಜೀವವಿಮೆ ಇಲಾಖೆ
ಬೆಂಗಳೂರು.

ಶ್ರೀ ಓಂ ಬ್ರಾಂಡ್ ಕೇಸರಿ

ಈ "ಓಂ" ಗುರ್ತಿನ ಕೇಸರಿಯು ಅತ್ಯಂತ ಪರಿಶುದ್ಧವಾದುದು. ಇದರಲ್ಲಿ ಯಾವ ಅಕ್ಕೇಸರವಾದ ಪದಾರ್ಥವೂ ಸೇರಿಲ್ಲ; ಮತ್ತು ಶಾಸ್ತ್ರೀಯವಾಗಿ ಪರಿಶುದ್ಧವಾದುದು. ದೇವಸ್ಥಾನಗಳಲ್ಲಿಯೂ ದೇವರ ಪೂಜೆಗೂ, ಔಷಧಿಗಳಿಗೂ ತಿಂಡಿ ಪದಾರ್ಥಗಳಿಗೂ ಸುಖ ಸಂತೋಷಕಾಲದಲ್ಲೂ ಉಪಯೋಗಿಸಲ್ಪಡಲು ಅರ್ಹವಾಗಿದೆ.

ಅತ್ಯಂತ ಪರಿಶುದ್ಧವಾದುದೆಂದು ಗ್ಯಾರಂಟಿ ಹೊಂದಿದೆ.

ವಲ್ಲಭದಾಸ್ ತೇಜಪಾಲ್
೧೪ ಗೋವಿಂದಪ್ಪನಾಯಕ್ ಸ್ಟ್ರೀಟ್, ಜಿ. ಟಿ. ಮದರಾಸು

ಸತ್ಯವಾದಿ ಪತ್ರಿಕೆಗೆ ಚಂದಾದಾರರಾಗಿರಿ

ಉತ್ಕೃಷ್ಟವಾದ ಹಿಂಗು



ರಿಜಿಸ್ಟರ್ಡ್ ಟ್ರೇಡ್ ಮಾರ್ಕ್

ಊಟವು ರುಚಿಕರವಾಗಿದ್ದು, ಸಂಪೂರ್ಣ ಆರೋಗ್ಯವೂ, ಸೌಖ್ಯವೂ ದೊರೆಯಲು

T.G. ಮಾರ್ಕಿನ ಹಿಂಗನ್ನು
ಉಪಯೋಗಿಸಿ.

ಇದನ್ನು ನೀವು ಒಂದು ಸಾರಿ ಉಪಯೋಗಿಸಿದರೆ, ನಂತರ ಬೇರೆ ಯಾವುದನ್ನೂ ಉಪಯೋಗಿಸುವುದಿಲ್ಲ.

ಒಂದು, ಅರ್ಧ, ಕಾಲು ಪೌಂಡಿನ, ಒಂದು ಸೇರು, ಒಂದು ಪಲಮ್ ಪ್ಯಾಕಿನಲ್ಲಿ ಎಲ್ಲಾ ಪ್ರಮುಖ ವ್ಯಾಪಾರಸ್ಥರಲ್ಲೂ ದೊರೆಯುತ್ತದೆ.

ನಮ್ಮ ಪರಿಮಳ ಅಡಿಕೆಪುಡಿಯು ಸುಪ್ರಸಿದ್ಧವಾದುದು.

ವಲ್ಲಭದಾಸ್ ತೇಜ್‌ಪಾಲ್
೧೪ ಗೋವಿಂದಪ್ಪನಾಯಕ್ ಸ್ಟ್ರೀಟ್, ಮದರಾಸು.

New Opera Talkies — Aryamala

ಪಿ. ಯು. ಚಿನ್ನಪ್ಪ, ಸರೋಜಿನಿ, ಸಂತಾನಲಕ್ಷ್ಮಿ, ಶಕುಂತಲ ಕೃಷ್ಣ, ಮಧುರಂ ಮುಂತಾದವರು ಪಾತ್ರವಹಿಸಿರುವರು

ಆರ್ಯಮಾಲಾ — ತಮಿಳು ಚಿತ್ರ

6th Week ನೇ ವಾರ

Ranjit — — Satyabhama

ರಣಜಿತ್ ಟಾಕೀಸ್

ವೈ. ವಿ ರಾವ್, ಪುಷ್ಪವಲ್ಲಿ ಪಾತ್ರವಹಿಸಿರುವ

3nd Week **ಸತ್ಯಭಾಮಾ** [ತೆಲುಗು]

ಶ್ರೀ ಸುಧಾ

ಸೇವನೆಯಿಂದ ರಕ್ತಕೊರತೆ, ಮಲಬಂಧ, ನರಗಳ ಅಶಕ್ತತೆ, ದೌರ್ಬಲ್ಯ, ನಿದ್ರಾಭಂಗ ನಿವಾರಣೆಯಾಗಿ, ಸಂಸಾರಸುಖಕ್ಕೆ ಅಪರಿಮಿತ ಶಕ್ತಿ ಲಭಿಸುವದು

ಅನೇಕರಿಂದ ಪ್ರಶಂಸಿಸಲ್ಪಟ್ಟಿದೆ. ವಸ್ತುಪ್ರದರ್ಶನಗಳಲ್ಲಿ ಪ್ರಾಶಸ್ತ್ಯವನ್ನು ಪಡೆದಿದೆ. ಬೆಲೆ 1 ರೂಪಾಯಿ